

ಕವಯಿತ್ರಿ, ಕಥೆಗಾರ್ತಿ ಹಿನಾ ಅಸ್ವಾನಿ (ಜನನ: 1992) ಗುಜರಾತ್‌ನ ಕಚ್ ಪ್ರದೇಶದ ಗಾಂಧಿಧಾಮ್‌ನವರು. ಸಿಂಧಿಯಲ್ಲಿ ಬರೆಯುವ ಅವರು ಗುಜರಾತಿ, ಹಿಂದಿ ಮತ್ತು ಇಂಗ್ಲಿಷ್‌ನಲ್ಲಿಯೂ ಲೇಖನಗಳನ್ನು ಬರೆದಿದ್ದಾರೆ. ಸಿಂಧಿ ಸಮುದಾಯದ ಸಾಂಸ್ಕೃತಿಕ ಸ್ವರೂಪವನ್ನು ಬಿಂಬಿಸುವ ಹಿನಾ ಅವರ ಕವನ ಸಂಕಲನ 'ಸಂಧಿಯತ್ ಜೀ ಸುರ್ಹಾಣಿ' ಕೇಂದ್ರ ಸಾಹಿತ್ಯ ಅಕಾಡೆಮಿಯ ಯುವ ಪುರಸ್ಕಾರ ಪಡೆದಿದೆ.

ಕೇಂದ್ರ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಚಂದ್ರಶೇಖರ ಕಂಬಾರರು ಕನ್ನಡ ಸಾಹಿತಿಯಾಗಿದ್ದು, ಕನ್ನಡ ಸಾಹಿತ್ಯ ಪರಂಪರೆಗೆ ಬೃಹತ್ ಪ್ರಮಾಣದ ಕೊಡುಗೆಯನ್ನು ನೀಡಿದ್ದಾರೆ ಎಂದು ಓದಿ ಬಲ್ಲೆ.

7 ಸಿಂಧಿ ಭಾಷೆಯು ಇತರ ಭಾರತೀಯ ಭಾಷೆಗಳಿಗಿಂತ ಭಿನ್ನವಾಗಿದೆ. ಅದನ್ನು ದೇವನಾಗರಿ ಮತ್ತು ಅರೇಬಿಕ್ ಲಿಪಿಯಲ್ಲಿ ಬರೆಯುತ್ತಾರೆ. ಅಂದರೆ, ಅರೇಬಿಕ್‌ನಲ್ಲಿ ಬರೆಯುವಾಗ ಬಲದಿಂದ ಎಡಕ್ಕೆ ಸಾಲುಗಳನ್ನು ಬರೆದರೆ, ದೇವನಾಗರಿಯಲ್ಲಿ ಎಡದಿಂದ ಬಲಕ್ಕೆ ಬರೆಯುತ್ತೇವೆ.

8 ಸಿಂಧಿ ಭಾಷಾ ಸಾಹಿತ್ಯ ವಲಯವು ಸದೃಢವಾಗಿದ್ದು, ಯುವ ಬರಹಗಾರರು ತಮ್ಮ ಆಲೋಚನೆಗಳನ್ನು ಮಂಡಿಸುವಲ್ಲಿ ಹಿಂದೆ ಬಿದ್ದಿಲ್ಲ. ಲಭ್ಯ ಅವಕಾಶಗಳನ್ನು ಅವರು ಸದುಪಯೋಗಪಡಿಸಿಕೊಳ್ಳುತ್ತಿದ್ದಾರೆ. ಸಾಹಿತ್ಯ ಚಟುವಟಿಕೆಗಳು ಇಲ್ಲಿ ಬಹುಪ್ರಮಾಣದಲ್ಲಿ ನಡೆಯುತ್ತಿವೆ. ಕಾರ್ಯಾಗಾರಗಳು, ಗೋಷ್ಠಿಗಳು, ಆನ್‌ಲೈನ್ ವೆಬಿನಾರ್‌ಗಳು... ಹೀಗೆ ಸದಾ ಒಂದಿಲ್ಲೊಂದು ಚಟುವಟಿಕೆ ನಡೆಯುತ್ತಿರುತ್ತದೆ. ಯುವಬರಹಗಾರರು ಹಿರಿಯ ಬರಹಗಾರರಿಂದ ಕಲಿಯುವುದಕ್ಕೆ ಉತ್ಸುಕರಾಗಿರುವುದರಿಂದ ಇಲ್ಲೊಂದು ಆಶಾದಾಯಕ ವಾತಾವರಣವಿದೆ. ಈ ಪ್ರೋತ್ಸಾಹವು ಸಾಹಿತ್ಯ ವಾತಾವರಣದಲ್ಲಿ ಉಲ್ಲಾಸ ಮೂಡಿಸಿದೆ. ಅಕಾಡೆಮಿಗಳು ಮತ್ತು ಸಂಘಟನೆಗಳು ಕೊಡುವ ಪ್ರಶಸ್ತಿ–ಪ್ರೋತ್ಸಾಹಗಳು ಬರಹಗಾರರಿಗೆ ಸದಾ ಪ್ರೇರಣೆಯಾಗಿವೆ.

ನನ್ನ ಪ್ರಕಾರ, ಬರಹಗಾರರಿಗೆ ಪ್ರಶಾಂತವಾದ ವಾತಾವರಣ ಮುಖ್ಯ. ತಮ್ಮ ಆಲೋಚನೆಗಳು, ಅವಲೋಕನ, ವಿಶ್ಲೇಷಣೆಗಳ ವಿವಿಧ ಆಯಾಮಗಳನ್ನು ಕಟ್ಟಿಕೊಡುವುದಕ್ಕೆ ಪೂರಕ ವಾತಾವರಣ ಬೇಕು. ಆದ್ದರಿಂದ ಬರಹಗಾರರು ಕೂಡ ಸಮಾಜದ ಒಳಿತನ್ನೇ ಕೇಂದ್ರೀಕರಿಸಿಕೊಂಡು ಬರೆಯಬೇಕು ಎನಿಸುತ್ತದೆ.

●